# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




**ಬೆಂಗಳೂರು:** "ಆರೆಸ್ಸೆಸ್@100: ಹಿನ್ನೆಲೆ, ತಾತ್ತ್ವಿಕತೆ ಮತ್ತು ಸಾಧನೆ" ಕುರಿತಾದ ಉತ್ಥಾನ ಮಾಸಪತ್ರಿಕೆಯ ವಿಶೇಷಾಂಕವನ್ನು ಉತ್ಥಾನ ಪ್ರಧಾನ ಸಂಪಾದಕ ಡಾ. ಎಸ್.ಆರ್. ರಾಮಸ್ವಾಮಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹ ಮುಕುಂದ ಸಿ.ಆರ್., ಕ್ಷೇತ್ರೀಯ ಪ್ರಚಾರಕ ಸುಧೀರ್, ಕ್ಷೇತ್ರೀಯ ಕಾರ್ಯವಾಹ ನಾ. ತಿಪ್ಪೇಸ್ವಾಮಿ, ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಕೇಶವಕೃಪಾದಲ್ಲಿ ಬಿಡುಗಡೆಗೊಳಿಸಿದರು.


ಸಂಪುಟ : 46 | ಸಂಚಿಕೆ : 18 | ಪುಷ್ಯ–ಮಾಘ | ಕಲಿಯುಗಾಬ್ದ 5126 | 15–01–2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಮತ್ತೆ ನೆನಪಾಗುವ ಯುಗದ್ರಷ್ಟ ಸ್ವಾಮಿ ವಿವೇಕಾನಂದ

ಸ್ವಾಮಿ ವಿವೇಕಾನಂದ ಎಂಬ ವಿದ್ಯುತ್ ಶಕ್ತಿಯ ಸಂಚಾರದ ಮಾತ್ರದಿಂದಾಗಿ ಭಾರತದಲ್ಲಾದ ಬದಲಾವಣೆ ಕಡಿಮೆಯದ್ದೇನಲ್ಲ. ಕೇವಲ 39 ವರ್ಷ, 5 ತಿಂಗಳು, 22 ದಿನಗಳು ಬದುಕಿದ್ದ ಸ್ವಾಮಿ ವಿವೇಕಾನಂದರು ಭಾರತದ ಪ್ರತೀ ಕ್ಷೇತ್ರದ ಔನತ್ಯಕ್ಕಾಗಿ ಕಟ್ಟಿಕೊಟ್ಟ ಕಲ್ಪನೆಗಳು ಮತ್ತು ಇಲ್ಲಿನ ಸಮಸ್ಯೆಗಳಿಗೆ ಅವರು ನೀಡಿದ ಪರಿಹಾರ ಇಂದಿಗೂ ಪ್ರಸ್ತುತ. ಸ್ವಾಮಿ ವಿವೇಕಾನಂದರ ಕಾಲಘಟ್ಟದ ಪ್ರಮುಖ ಇತಿಹಾಸಕಾರನಾಗಿದ್ದ ಬಿಮಾನ್ ಬಿಹಾರಿ ಮಜುಮ್ದಾರ್ "1897ರಲ್ಲಾದ ಸ್ವಾಮಿ ವಿವೇಕಾನಂದರ ವಿದೇಶ ಪ್ರವಾಸದ ಪುನರ್ ಆಗಮನ ಭಾರತದ ರಾಷ್ಟ್ರೀಯತೆಯ ಇತಿಹಾಸದಲ್ಲಿ ಹೊಸದೊಂದು ಪರ್ವವೊಂದನ್ನು ನಿರ್ಮಿಸಿತು" ಎಂದು ನುಡಿದಿದ್ದಾರೆ.

ಏಕೆ ಸ್ವಾಮೀಜಿಯವರ ಪುನರ್ ಆಗಮನ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಹೆಚ್ಚು ಮಹತ್ವಯುತವಾಗಿತ್ತೆನ್ನುವುದಕ್ಕೆ ಈ ನಿದರ್ಶನವೇ ಸಾಕ್ಷಿ. ಫೆ.14, 1897ರಲ್ಲಿ ಸ್ವಾಮೀಜಿ ತಮ್ಮ ಮದ್ರಾಸ್ ಉಪನ್ಯಾಸದಲ್ಲಿ "ಗುಲಾಮರಾಗಿರುವುದನ್ನು ಬಿಟ್ಟು, ನೂರಾರು ದೇವರುಗಳನ್ನು ಪಕ್ಕಕ್ಕಿರಿಸಿ ಮುಂದಿನ 50 ವರ್ಷಗಳ ಕಾಲ ತಾಯಿ ಭಾರತಿಯನ್ನು ಮಾತ್ರ ಪೂಜಿಸೋಣ" ಎಂದಿದ್ದರು. ಕಾಕತಾಳೀಯವೆಂಬಂತೆ ಸರಿಯಾಗಿ 50 ವರ್ಷಗಳ ನಂತರ ಅಂದರೆ 1947 ಫೆ.23ರಂದು ಯು.ಕೆಯ ಆಗಿನ ಪ್ರಧಾನಿ ಮೇಜರ್ ಅಟ್ಲಿ, ಹೌಸ್ ಆಫ್ ಕಾಮನ್ಸ್‌ನಲ್ಲಿ ಭಾರತವನ್ನು ಬಿಟ್ಟು ಬರುವ ಮಾತನ್ನಾಡುತ್ತಾನೆ! ಸ್ವಾಮಿ ವಿವೇಕಾನಂದರು ಅವತರಿಸಿ 162 ವರ್ಷಗಳು ಸಂದಿರುವ ಈ ಹೊತ್ತಿನಲ್ಲಿ ಅವರು ಸಂತಶ್ರೇಷ್ಠ ಮಾತ್ರವಲ್ಲದೆ ಭಾರತದ ಸರ್ವಾಂಗೀಣ ಸ್ವಾತಂತ್ರ್ಯಕ್ಕಾಗಿ ದುಡಿದವರಿಗೂ ಪ್ರೇರಣೆಯನ್ನೊದಗಿಸಿದವರು ಎನ್ನುವುದನ್ನು ನಾವು ಅರ್ಥೈಸಿಕೊಳ್ಳಬೇಕು.

**ಸ್ವಾಮಿ ವಿವೇಕಾನಂದರ ನುಡಿ ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಹೋರಾಟದ ಮುನ್ನುಡಿ:** 1893ರ ಸ್ವಾಮಿ ವಿವೇಕಾನಂದರ ಚಿಕಾಗೋ ಉಪನ್ಯಾಸವೇ ಪಾಶ್ಚಾತ್ಯರಿಗೆ ನುಂಗಲಾರದ ತುತ್ತಾಗಿತ್ತು. ಹೆಸರಿಗೆ ಮಾತ್ರ 'ವಿಶ್ವಧರ್ಮ ಸಮ್ಮೇಳನ' ಎಂಬ ಶೀರ್ಷಿಕೆಯಡಿಯಲ್ಲಿ ಕಾರ್ಯಕ್ರಮ ಆಯೋಜಿಸಲ್ಪಟ್ಟಿದ್ದರೂ, ಕೊಲಂಬಸ್ ಅಮೇರಿಕಾವನ್ನು ಕಂಡುಹಿಡಿದು 400 ವರ್ಷಗಳಾದ ಸಂಭ್ರಮದ ಜೊತೆಗೆ ಕ್ರೈಸ್ತ ರಿಲಿಜನ್ನೇ ಶ್ರೇಷ್ಠ ಎನ್ನುವುದನ್ನು ಜಾಗತಿಕ ಮಟ್ಟದಲ್ಲಿ ಪ್ರಸ್ತುತಪಡಿಸುವ ಉದ್ದೇಶವಡಗಿತ್ತು. ಸ್ವಾಮಿ ವಿವೇಕಾನಂದರು ಭಾಗವಹಿಸಿದ ಕಾರಣ ಅದು ನಿಜಾರ್ಥದಲ್ಲಿ "ವಿಶ್ವಧರ್ಮ ಸಮ್ಮೇಳನ" ಎನಿಸಿತು. ವಿಶ್ವಧರ್ಮ ಸಮ್ಮೇಳನದ ಕುರಿತಾಗಿ ಆಗಿನ ವಿಮರ್ಶಕರು "ಒಂದು ವೇಳೆ ಸ್ವಾಮಿ ವಿವೇಕಾನಂದರು ಚಿಕಾಗೋದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸದೇ ಇರುತ್ತಿದ್ದರೆ ಅದು ಸ್ವ ಮತ ಪ್ರತಿಪಾದನಾ ಸಭೆಯಾಗಿರುತ್ತಿತ್ತಷ್ಟೇ" ಎಂದಿರುವುದೇ ಇದಕ್ಕೆ ಸಾಕ್ಷಿ. ಸ್ವಾಮೀಜಿಯವರು ತಮ್ಮ ಭಾಷಣಗಳಲ್ಲಿ ಜಗತ್ತಿಗೆ ವಿಶ್ವಧರ್ಮದ ಕಲ್ಪನೆ ಕಟ್ಟಿಕೊಟ್ಟಿದ್ದಲ್ಲದೆ, ಅವರ ಮಾತುಗಳ ಮೂಲಕವೇ ಭಾರತ ವಿರೋಧಿ ಶಕ್ತಿಗಳಿಗೆ ತಕ್ಕ ಪಾಠ ಕಲಿಸಿದ್ದರು.

ಸ್ವಾಮೀಜಿಯವರ ದೇಶಭಕ್ತಿಯ ಕಲ್ಪನೆ ಸೊಗಸಾಗಿತ್ತು. ಸ್ವಾಮೀಜಿಯೇ ಹೇಳುವಂತೆ "ನಮ್ಮ ಪರಂಪರೆಯ ಜನರನ್ನು ನಮ್ಮವರೆಂದು ಭಾವಿಸುವುದಕ್ಕೆ ನಿನ್ನಿಂದ ಸಾಧ್ಯವಾಗುತ್ತದೆಯೇ? ಅವರ ಉದ್ಧಾರಕ್ಕಾಗಿ ನೀನು ನಿರಂತರವಾಗಿ ಶ್ರಮವಹಿಸುತ್ತೀಯಾ? ಅವರ ಹಿತಚಿಂತನೆಯಿಂದ ನೀನು ನಿದ್ರಾಹೀನನಾಗುತ್ತೀಯಾ? ನಿನ್ನ ಹೃದಯದ ಪ್ರತಿ ಬಡಿತದಲ್ಲೂ ಇವರುಗಳ ಕುರಿತು ಯೋಜಿಸುತ್ತೀಯಾ? ನೀನು ಹಾಗಾದಾಗ ಮಾತ್ರ ದೇಶಭಕ್ತನಾಗುವ ಪ್ರಥಮ ಹೆಜ್ಜೆಯನ್ನು ಇಟ್ಟಿದ್ದೀಯ" ಎಂದು ಸ್ವಾಮೀಜಿ ತಿಳಿಸುತ್ತಾರೆ.

ಸ್ವಾಮಿ ವಿವೇಕಾನಂದರ ಪ್ರಭಾವದ ಕುರಿತು ದಾಖಲೆ ಸಹಿತ ನಮಗೆ ಸಿಗುವಂತದ್ದು ಚಾರ್ಲ್ ಟೆಗಾರ್ಟ್ ರಿಪೋರ್ಟ್‌ನಲ್ಲಿ. ಆತ ಕಲ್ಕತ್ತಾದಲ್ಲಿ ಅಧಿಕಾರದಲ್ಲಿದ್ದಾಗ ಗೂಢಚರ್ಯೆ ವಿಭಾಗದಲ್ಲಿ ಕಾರ್ಯ ನಿರ್ವಹಿಸಿದ್ದ. ಆ ಸಂದರ್ಭದಲ್ಲಿ ಅನೇಕ ಕ್ರಾಂತಿಕಾರಕ ಚಟುವಟಿಕೆಗಳು ನಡೆಯುತ್ತವೆ. ಲಾಹೋರ್ ಕಾನ್ಸ್ಪಿರಸಿಗೆ ಕಾರಣಕರ್ತರಾದ ರಾಶ್ ಬಿಹಾರಿ ಬೋಸ್, ಬರಸಾಲ್ ಕಾನ್ಸ್ಪಿರಸಿಯಲ್ಲಿ ಸೆರೆಸಿಕ್ಕ 12 ಜನ ಯುವಕರು, ಚಿತ್ತಗಾಂವ್ ಕಾನ್ಸ್ಪಿರಸಿಯಲ್ಲಿ ಮಹತ್ವದ ಪಾತ್ರವಹಿಸಿದ ಸೂರ್ಯಸೇನ ಮುಂತಾದವರೆಲ್ಲರಿಗೂ ಪ್ರೇರಣೆಯನ್ನೊದಗಿಸಿದ್ದು ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣಾಶ್ರಮ ಎನ್ನುವುದು ತಿಳಿಯಿತು. ಬ್ರಿಟಿಷರ ಕೈಸಿಕ್ಕ ಬಹುತೇಕ ಕ್ರಾಂತಿಕಾರಿಗಳಲ್ಲಿ ಸಿಗುತ್ತಿದ್ದಿದ್ದು ಭಗವದ್ಗೀತೆ ಮತ್ತು ವಿವೇಕಾನಂದರ ಪತ್ರಮಾಲೆಗಳು, ಕೊಲೊಂಬೊದಿಂದ ಅಲ್ಮೋರಕ್ಕೆ ಉಪನ್ಯಾಸಗಳು.



ಭಾಗಾ ಜತಿನ್ ಎಂಬ ಅಪ್ರತಿಮ ಪರಾಕ್ರಮಿಗೆ ತನ್ನ ಕ್ರಾಂತಿಕಾರಿ ಹೋರಾಟಕ್ಕೆ ಪ್ರೇರಣೆಯನ್ನೊದಗಿಸಿದವರು ಸ್ವಾಮಿ ವಿವೇಕಾನಂದರು. ಆತ ಪ್ರಮುಖನಾಗಿದ್ದ ಅನುಶೀಲನ ಸಮಿತಿಯ ರಹಸ್ಯ ಪತ್ರಗಳ ಕೋಡ್ ವರ್ಡ್ 'ಮಿಶನ್' ಮತ್ತು ಪಾಸ್‌ವರ್ಡ್ 'ವಿವೇಕಾನಂದ' ಎಂದಾಗಿತ್ತು! ಯೋಗಿ ಅರವಿಂದರು ಆಲಿಪುರದ ಜೈಲಿನಲ್ಲಿದ್ದಾಗ ಚಾರ್ಲ್ಸ್ ಟೆಗಾರ್ಟ್ ಪರಿವೀಕ್ಷಣೆಗೆ ಬರುತ್ತಾನೆ. ಆಗ ಅರವಿಂದರ ಬಳಿಯಿದ್ದ ಒಂದು ಪೊಟ್ಟಣವನ್ನು ಆತ ತೆಗೆದುಕೊಂಡು ಏನಿದು ಎಂದು ಕೇಳುತ್ತಾನೆ. ಅದಕ್ಕೆ ಅರವಿಂದರು "Its a future bomb" ಎಂದು ಉತ್ತರಿಸುತ್ತಾರೆ. ದಿಗ್ಭ್ರಾಂತನಾದ ಟೆಗಾರ್ಟ್ ಆ ಪೊಟ್ಟಣವನ್ನು ಬಿಚ್ಚಿ ನೋಡಿದಾಗ ಅದರಲ್ಲಿದ್ದಿದ್ದು ಮಣ್ಣಿನ ಹೆಂಟೆ. ಆಗ ಅರವಿಂದರು "ಇದನ್ನು ಸಾಮಾನ್ಯ ಮಣ್ಣಿನ ಹೆಂಟೆ ಎಂದು ಭಾವಿಸಬೇಡಿ. ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರಂತಹ ಶಕ್ತಿಕೇಂದ್ರಗಳು ಓಡಾಡಿದ ದಕ್ಷಿಣೇಶ್ವರದ ಮಣ್ಣಿದು. ಮುಂದೆ ಅನೇಕ ಕ್ರಾಂತಿಕಾರಿಗಳು ಈ ಮಣ್ಣಿನ ಸಹಕಾರದಿಂದ ನಿಮ್ಮ ವಿರುದ್ಧ ಮುಗಿಬೀಳಲಿದ್ದಾರೆ" ಎಂದರು.

1892ರಲ್ಲಿ ತಮ್ಮ ಪರಿವ್ರಾಜಕ ಸಮಯದಲ್ಲಿ ಮುಂಬೈನಲ್ಲಿ ತಿಲಕರ ಮತ್ತು ಸ್ವಾಮೀಜಿಯ ಭೇಟಿಯಾಗಿತ್ತು. ಆಗ ಸ್ವಾಮಿ ವಿವೇಕಾನಂದರಲ್ಲಿ ತಿಲಕರು, "ನೀವ್ಯಾಕೆ ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸಬಾರದು" ಎಂದು ಕೇಳಿದಾಗ ಸ್ವಾಮೀಜಿ, "ನಾನು ಸ್ವಾತಂತ್ರ್ಯವನ್ನು 24 ಗಂಟೆಗಳಲ್ಲಿ ಕೊಡಿಸಬಲ್ಲೆ! ಆದರೆ ದೊರೆತ ಸ್ವಾತಂತ್ರ್ಯವನ್ನು ಜವಾಬ್ದಾರಿಯುತವಾಗಿ ಕಾಪಾಡಿಕೊಳ್ಳುವವರು ಬೇಕಾಗಿದ್ದಾರೆ" ಎಂದರಲ್ಲದೆ ಅಂತಹವರ ನಿರ್ಮಾಣಕ್ಕೆ ಪಣತೊಟ್ಟರು. 1901ರಲ್ಲಿ ಸ್ವಾಮೀ ವಿವೇಕಾನಂದರನ್ನು ಮತ್ತೊಮ್ಮೆ ಕೊಲ್ಕತ್ತಾದಲ್ಲಿ ಭೇಟಿಯಾಗಿದ್ದ ತಿಲಕರಲ್ಲಿ ಸ್ವಾಮೀಜಿ, "Let us exchange our role" ಎಂದಿದ್ದರಂತೆ. ಸ್ವಾಮೀಜಿಯವರ ಕಾರ್ಯವೈಖರಿಯಿಂದಾಗಿ ಪ್ರೇರೇಪಿತರಾದ ತಿಲಕರು ಸ್ವಾಮೀಜಿಯನ್ನು "Real father of India's Regeneration" ಎಂದು ಸಂಬೋಧಿಸಿದ್ದರು.

ಸ್ವಾಮೀ ವಿವೇಕಾನಂದರಿಂದ ತಮ್ಮ 15ನೇ ವರ್ಷಕ್ಕೆ ಪ್ರೇರಣೆಯನ್ನು ಪಡೆದು ತ್ಯಾಗ ಜೀವನಕ್ಕೆ ಮುಂದಾದವರು 1897 ಹುಟ್ಟಿದ ಸುಭಾಶ್‌ಚಂದ್ರ ಬೋಸ್. ಆತ 'ನಿಯೋ ವಿವೇಕಾನಂದ' ಎಂಬ ತಂಡವನ್ನು ಕಟ್ಟಿಕೊಳ್ಳುತ್ತಾನೆ. ಶಿಕ್ಷಣದ ಜೊತೆಗೆ ರಾಷ್ಟ್ರದ ಪುನರುಜ್ಜೀವನ ಅದರ ಧ್ಯೇಯವಾಗಿತ್ತು. ಸುಭಾಶ್‌ಚಂದ್ರರೇ ಹೇಳಿರುವಂತೆ "When a troup of realmen is ready, then the aim of Swami Vivekananda is fulfilled." ಎನ್ನುವುದನ್ನು ಯುವ ಕಾಂಗ್ರೆಸ್ ಅಧಿವೇಶನ ಸೇರಿದಂತೆ ಹಲವು ವೇದಿಕೆಗಳಲ್ಲಿ ಸುಭಾಶ್‌ಚಂದ್ರ ಬೋಸ್ ತಿಳಿಸುತ್ತಾರೆ.

ರಾಮಕೃಷ್ಣಾಶ್ರಮಕ್ಕೆ ಗಾಂಧೀಜಿ ಭೇಟಿ ನೀಡಿದಾಗ ಸ್ವಾಮಿ ವಿವೇಕಾನಂದರ ಕುರಿತು ಮಾತನಾಡಲು ಹೇಳಿದರು. ಆಗ ಗಾಂಧೀಜಿ "ಸ್ವಾಮೀ ವಿವೇಕಾನಂದರ ಅಧ್ಯಯನದ ನಂತರ ನನ್ನಲ್ಲಿದ್ದ ಭಾರತಪ್ರೀತಿ ಸಾವಿರ ಪಟ್ಟು ಹೆಚ್ಚಾಗಿದೆ" ಎಂದು ನುಡಿದರು. ಗುರುದೇವ ರವೀಂದ್ರನಾಥ ಠಾಗೋರ್ ಅವರು "ನೀವು ಭಾರತದ ಅಧ್ಯಯನ ಮಾಡಬೇಕಾದರೆ, ಸ್ವಾಮೀ ವಿವೇಕಾನಂದರ ಅಧ್ಯಯನ ಮಾಡಿ" ಎಂಬ ತಮ್ಮ ಮಾತಿನ ಮೂಲಕ ವಿವೇಕಾನಂದರ ಭಾರತಪ್ರೀತಿಯ ಕುರಿತು ಸ್ಪಷ್ಟಪಡಿಸುತ್ತಾರೆ. "ಸ್ವಾಮೀಜಿ ಅವರ ಅದ್ಭುತ ಕಂಠದಿಂದ 'ಇಂಡಿಯಾ' ಎಂದು ಕೇಳಿದಾಗಿನಿಂದ ಭಾರತದ ಕುರಿತಾದ ಪ್ರೀತಿ ನಮ್ಮಲ್ಲಿ ಜನನವಾಯಿತು" ಎಂದು ಅಮೇರಿಕಾದ ಸ್ವಾಮೀ ವಿವೇಕಾನಂದರ ಶಿಷ್ಯೆ ಕ್ರಿಸ್ಟಿನಾ ತಿಳಿಸುತ್ತಾರೆ. "ಭಾರತದಲ್ಲಿ ಏನೇ ತೊಂದರೆಯಾದರೂ ಮೊದಲು ತಿಳಿಯುತ್ತಿದ್ದಿದ್ದು ವಿವೇಕಾನಂದರ ಹೃದಯಕ್ಕೆ" ಎಂಬ ಸೋದರಿ ನಿವೇದಿತಾಳ ಮಾತು ಸ್ವಾಮೀ ವಿವೇಕಾನಂದರ ಭಾರತ ಪ್ರೀತಿಯ ಕುರಿತು ಬೆಳಕನ್ನು ಚೆಲ್ಲುತ್ತವೆ.


ಸ್ವಾಮೀಜಿ ಅವರ ವಿಶ್ವಧರ್ಮದ ಕುರಿತಾದ ಕಲ್ಪನೆ ಹೀಗಿತ್ತು. "ವಿಶ್ವಧರ್ಮ ಎಂದರೆ ಅದು ದೇಶ ಕಾಲಗಳ ಮಿತಿ ಮೀರಿರಬೇಕು. ಆ ಧರ್ಮ ಭಾಸ್ಕರನ ಬೆಳಕು ಕೃಷ್ಣನ ಅನುಯಾಯಿಗಳ ಮೇಲೆ, ಕ್ರಿಸ್ತನ ಅನುಯಾಯಿಗಳ ಮೇಲೆ, ಪುಣ್ಯವಂತರ ಮೇಲೆ, ಪಾಪಿಗಳ ಮೇಲೆ ಸಮವಾಗಿ ಬೀಳಬೇಕು. ಅದು ವೈದಿಕವಾಗಲಿ, ಮಹಮದ್ದೀಯವಾಗಲಿ, ಬೌದ್ಧವಾಗಲಿ ಅಥವ ಕ್ರೈಸ್ತವಾಗಲಿ ಆಗಿರದೆ ಇವೆಲ್ಲದರ ಸಮಗ್ರೀಕರಣವಾಗಿರಬೇಕು. ಅದು ಸುಧಾರಣೆ ಅಥವಾ ಅಭಿವೃದ್ಧಿಗೆ ಅಪಾರ ಅವಕಾಶ ಹೊಂದಿರಬೇಕು. ಅದು ಪಶುಸದೃಶ ಕಾಡು ಜನರಿಂದ ಹಿಡಿದು ಹೃದಯ ಬುದ್ಧಿಗಳ ತುತ್ತತುದಿಗೇರಿ ಸಾಮಾನ್ಯ ಮಾನವತೆಯ ಮೇರೆಯನ್ನು ಮೀರಿರುವ ಮಹಾಮಾನವನವರೆಗೆ ಸರ್ವರಿಗೂ ಆಶ್ರಯವನ್ನು ನೀಡುವಂಥದ್ದಾಗಿರಬೇಕು. ಒಟ್ಟಿನಲ್ಲಿ ಜಗತ್ತಿನ ಜನರೆಲ್ಲರೂ ಒಪ್ಪುವಂತಿರಬೇಕು." ಎಂದು ತಿಳಿಸಿದರು.

ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಟ ಉತ್ತುಂಗದಲ್ಲಿದ್ದ ಸಮಯದಲ್ಲೇ ನಮ್ಮಲ್ಲಿ ಸಾಮಾಜಿಕ ಸ್ವಾತಂತ್ರ್ಯದ ಅಗತ್ಯತೆಯೂ ಇತ್ತು. ಸ್ವಾಮಿ ವಿವೇಕಾನಂದರು ತಮ್ಮ ಬದುಕಿನುದ್ದಕ್ಕೂ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ್ದಾರೆ. ಪರಿವ್ರಾಜಕ ದಿನಗಳಲ್ಲಿ ಕೇರಳಕ್ಕೆ ಬಂದಿದ್ದ ಸ್ವಾಮೀಜಿ ಅಲ್ಲಿನ ಜಾತಿಬೇಧವನ್ನು ಕಂಡು "ಇದೊಂದು ದೊಡ್ಡ ಹುಚ್ಚಾಸ್ಪತ್ರೆ" ಎಂದಿದ್ದರು. ಹಾಗೆಯೇ ಅಲ್ಲಿನ ಸಾಮಾಜಿಕ ಬದಲಾವಣೆಗೆ ಶ್ರಮಿಸಿದ ನಾರಾಯಣ ಗುರುಗಳ ಶೋಧಕ್ಕೂ ಸ್ವಾಮೀಜಿ ಕಾರಣೀಭೂತರಾಗುತ್ತಾರೆ ಎನ್ನುವುದನ್ನು ತಿಳಿಯಬೇಕಾಗಿದೆ. ಈ ರಾಷ್ಟ್ರದ ಎರಡು ಆದರ್ಶಗಳು ತ್ಯಾಗ ಮತ್ತು ಸೇವೆ ಎನ್ನುವುದನ್ನು ಹೇಳುತ್ತಿದ್ದ ಸ್ವಾಮೀಜಿ ದೀನ ದಲಿತ ಸೇವೆ ಮಾಡುವುದರ ಕುರಿತು ಭಾರತೀಯರಿಗೆ ತಿಳಿಸುತ್ತಾರೆ. ಅಷ್ಟೇ ಅಲ್ಲದೇ ದೀನರನ್ನೂ ದೇವರಂತೆ ಕಾಣು ಎನ್ನುವ ಕಲ್ಪನೆಯನ್ನು ನಾಡಿಗೆ ಕಟ್ಟಿಕೊಡುತ್ತಾರೆ.

"ಅಂಧಾನುಕರಣೆ ನಾಗರಿಕತೆಯ ಅವನತಿಗೆ ಕಾರಣವಾಗುತ್ತದೆ" ಎನ್ನುವುದನ್ನು ಸಮರ್ಥವಾಗಿ ತಿಳಿಸಿದ ಸ್ವಾಮಿ ವಿವೇಕಾನಂದರು ಅನೇಕ ಮೂಢನಂಬಿಕೆಯ ರೂಪದಲ್ಲಿ ಬಂದಂತಹ ಅಂಧಾನುಕರಣೆಯ ವಿರುದ್ಧ ಕಟುವಾಗಿ ಟೀಕಿಸಿದ್ದಾರೆ ಜೊತೆಗೆ ಪರಿಹಾರವನ್ನೂ ತಿಳಿಸಿದ್ದಾರೆ. ನಮಗೆ ಪ್ರಥಮವಾಗಿ ನಮ್ಮ ರಾಷ್ಟ್ರದ ಸಂಸ್ಕೃತಿಯ ಅರಿವು ಮುಖ್ಯವಾಗಿರಬೇಕು. ನಮ್ಮ ದೇಶದ ಆತ್ಮವಾದ ಆಧ್ಯಾತ್ಮವನ್ನು ಮರೆತರೆ ನಮಗೆ ಉಳಿಗಾಲವಿಲ್ಲ. ನಮ್ಮನ್ನು ನಾವು ಅರಿತುಕೊಳ್ಳುವ ಆದ್ಯ ಕರ್ತವ್ಯ ನಮ್ಮೆಲ್ಲರ ಮೇಲಿದೆ. ಅದರ ಜೊತೆಯಲ್ಲಿ ಜಗತ್ತಿನ ಒಳ್ಳೆಯ ಸಂಗತಿಗಳನ್ನು ಬಿಗಿದಪ್ಪಿಕೊಂಡು ನಮ ಮಣ್ಣಿನ ಸತ್ವಕ್ಕೆ ಅನುಗುಣವಾಗಿ ಅವುಗಳನ್ನು ಸ್ವೀಕರಿಸುವ ಔದರ್ಯ ನಮಗಿರಬೇಕೇ ವಿನಃ ಅವುಗಳನ್ನು ಅಲ್ಲಿನಂತೆಯೇ ಅನುಕರಿಸುವ ಪ್ರವೃತ್ತಿಯನ್ನು ದೂರ ಸರಿಸಬೇಕಾಗಿದೆ ಎಂದು ತಿಳಿಸಿದ್ದರು.

## ಸಂಸ್ಮರಣೆ

# ಆರ್‌ಎಸ್‌ಎಸ್ ಹಿರಿಯ ಪ್ರಚಾರಕ ಬಾಬುರಾವ್ ದೇಸಾಯಿ



ಸಂಘಪರಿವಾರದ ಭಾಗವಾಗಿ ಸೇವಾಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದ ಶ್ರೀ ಬಾಬೂರಾವ್ ದೇಸಾಯಿಯವರು 1925ರಲ್ಲಿ ಗೋವಾದ ಪೆಡನೆಯಲ್ಲಿ ಜನಿಸಿದರು. ತಂದೆ ಶ್ರೀ ನಾರಾಯಣರಾವ್ ದೇಸಾಯಿ ಮತ್ತು ತಾಯಿ ಶ್ರೀಮತಿ ಹಂಸಾಬಾಯಿ. ಬಾಬು ರಾವ್ ದೇಸಾಯಿಯವರು 4 ವರ್ಷದ ಮಗುವಾಗಿರುವಾಗ ತಮ್ಮ ತಾಯಿಯನ್ನು ಕಳೆದುಕೊಳ್ಳುತ್ತಾರೆ. ಬಳಿಕ ಅವರ ಅತ್ತೆ ನರಸೋಬಾಡಿಯ ಅವರ ಮನೆಯಲ್ಲಿ ಬೆಳೆಯುತ್ತಾರೆ. ಪ್ರಾಥಮಿಕ ಶಿಕ್ಷಣ ಪೋರ್ಚುಗೀಸ್ ಮತ್ತು ಮರಾಠಿಯಲ್ಲಿ ಪಡೆದ ದೇಸಾಯಿಯವರು ತಮ್ಮ ಹನ್ನೆರಡನೇ ವಯಸ್ಸಿನಲ್ಲಿ ಬೆಳಗಾವಿಗೆ ತೆರಳುತ್ತಾರೆ.


ಚಿಕ್ಕಂದಿನಿಂದಲೂ ಹಾರ್ಮೋನಿಯಂ ವಾದನದಲ್ಲಿ ಆಸಕ್ತಿ ಹೊಂದಿದ್ದ ಅವರು ಅದರ ಅಭ್ಯಾಸ ಮಾಡುತ್ತಾರೆ. ಸಾಹಿತ್ಯ ವಿಷಯದಲ್ಲಿ ವಿಶೇಷ ಆಸಕ್ತಿ ಇದ್ದ ಕಾರಣ ಇಂಗ್ಲೀಷ್ ಸಾಹಿತ್ಯದಲ್ಲಿ ಬಿ.ಎ. ಪದವಿಯನ್ನು ಪಡೆಯುತ್ತಾರೆ. ಇಂಗ್ಲಿಷ್‌ನ ಹೊರತಾಗಿ ಕೊಂಕಣಿ, ಮರಾಠಿ, ಹಿಂದಿ, ಕನ್ನಡ, ಪೋರ್ಚುಗೀಸ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಪ್ರಾವೀಣ್ಯತೆ ದೇಸಾಯಿಯವರಿಗಿತ್ತು.

ಹೀಗೆ ಬೇರೆ ಬೇರೆ ಭಾಷೆಗಳಲ್ಲಿ ಪ್ರಭುತ್ವ ಪಡೆದ ದೇಸಾಯಿಯವರು ಮೊದಲ ಬಾರಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಗೆ ಬಂದದ್ದು 1942ರಲ್ಲಿ. ದತ್ತಾ ಜೋಷಿಯವರ ಮೂಲಕ ಸಂಘಕ್ಕೆ ಬಂದಂತಹ ಅವರು ಸಂಘದ ಚಿಂತನೆಗಳಿಂದ ಪ್ರಭಾವಿತರಾಗುತ್ತಾರೆ. 1949ರಲ್ಲಿ ಶ್ರೀ ಯಾದವರಾವ್ ಜೋಶಿ, ಶ್ರೀ ಜಗನ್ನಾಥರಾವ್ ಜೋಶಿ, ಶ್ರೀ ಬಾವೂರಾವ್ ಕಾಕಡೆಯವರ ಪ್ರೇರಣೆಯಿಂದ ಸಂಘ ಪ್ರಚಾರಕ, ಬೆಳಗಾವಿ ನಗರ ಪ್ರಚಾರಕರಾಗಿ ಸಂಘಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಾರೆ. ಮುಂದೆ ಕಾರವಾರ, ಧಾರವಾಡ, ಬೆಳಗಾವಿ ಜಿಲ್ಲೆಗಳಿಗೆ ಜಿಲ್ಲಾ ಪ್ರಚಾರಕರಾಗಿ ಕಾರ್ಯನಿರ್ವಹಿಸುತ್ತಾರೆ. 1967ರ ಹೊತ್ತಿಗೆ ಧಾರವಾಡ – ಕಲ್ಬುರ್ಗಿ – ಬಳ್ಳಾರಿ ವಿಭಾಗಗಳಿಗೆ ವಿಭಾಗ ಪ್ರಚಾರಕರಾಗಿ ಸೇವೆ ಸಲ್ಲಿಸುತ್ತಿದ್ದ ದೇಸಾಯಿ ಅವರು ಪ್ರಸಿದ್ಧ ಲೇಖಕ ಶ್ರೀ ಬಾಳಾಶಾಸ್ತ್ರೀ ಹರಿದಾಸರೊಂದಿಗೆ ಸಂಶೋಧನಾ ಕಾರ್ಯದಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ.

ಸಂಘ ಪರಿವಾರದ ಕೆಲಸಗಳಲ್ಲಿ ನಿರಂತರವಾಗಿ ತಮ್ಮನ್ನು ತಾವು ಜೋಡಿಸಿಕೊಂಡಿದ್ದ ಅವರು 1983ರಲ್ಲಿ ವಿಶ್ವ ಹಿಂದು ಪರಿಷದ್ ಕರ್ನಾಟಕ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗುತ್ತಾರೆ. 1985ರಲ್ಲಿ ಆಂಧ್ರ ಮತ್ತು ಕರ್ನಾಟಕಗಳು ಸೇರಿದ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿಯಾಗಿ ಮತ್ತು 1987ರಲ್ಲಿ ಕರ್ನಾಟಕ ಆಂಧ್ರ ಕೇರಳ ತಮಿಳುನಾಡು ಸೇರಿದ ದಕ್ಷಿಣಾಂಚಲದ ಸಂಘಟನಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ದೇಸಾಯಿ ಅವರಿಗೆ 1971ರಲ್ಲಿ ಪರಮಪೂಜ್ಯ ಶ್ರೀ ಗುರೂಜಿಯವರು ಶಿರಸಿಗೆ ಚಿಕಿತ್ಸೆಗಾಗಿ ಬಂದಾಗ 35 ದಿನಗಳ ಕಾಲ ಅವರ ಶುಶ್ರೂಷೆ ಮಾಡುವ ಅದೃಷ್ಟ ಒದಗಿ ಬಂದಿತ್ತು. 1990ರ ಸಂದರ್ಭದಲ್ಲಿ ಅಖಿಲ ಭಾರತೀಯ ಕಾರ್ಯದರ್ಶಿಯಾಗಿದ್ದ ದೇಸಾಯಿಯವರು ಶ್ರೀ ರಾಮಜನ್ಮಭೂಮಿ, ಗೋರಕ್ಷಾ ಅಭಿಯಾನಗಳಂತಹ ಸನಾತನ ಆಂದೋಲನಗಳಲ್ಲಿ ಭಾಗವಹಿಸಿರುವುದು ಗಮನಾರ್ಹ. ಏಕಲ್ ವಿದ್ಯಾಲಯದ ಪ್ರಭಾವಿಯಾಗಿದ್ದ ಅವರು 1997 ವಿಶೇಷ ಆಮಂತ್ರಿತ ಕೇಂದ್ರೀಯ ಕಾರ್ಯಕಾರಿಣಿ ಸದಸ್ಯರಾಗಿ ಆಯ್ಕೆಯಾಗಿದ್ದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ವಿಶ್ವ ಹಿಂದೂ ಪರಿಷತ್ತಿನ ಮೂಲಕ ಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿದ್ದ ಬಾಬುರಾವ್ ದೇಸಾಯಿ ಅವರು 2021ರ ಜನವರಿ 22ರಂದು ನಿಧನರಾದರು.

## ಪುಸ್ತಕ ಪರಿಚಯ




### ಸಂದುಹೋದ ಸಾತ್ವಿಕರು

**ಲೇಖಕರು:** ಡಾ. ಹೆಚ್. ಆರ್.ವಿಶ್ವಾಸ
**ಪ್ರಕಾಶನ :** ಸಾಹಿತ್ಯ ಸಿಂಧು ಪ್ರಕಾಶನ
**ಬೆಲೆ :** ರೂ:100


ನೂರಾರು ಪುಸ್ತಕಗಳು ಪಾಂಡಿತ್ಯಪೂರ್ಣವಾಗಿ ಹೇಳುವ ವಿಚಾರಗಳ ಪ್ರಭಾವಕ್ಕಿಂತಲೂ ವ್ಯಕ್ತಿಯೊಬ್ಬ ಪ್ರತ್ಯಕ್ಷ ಬದುಕಿದ ರೀತಿ, ಅವನ ವ್ಯವಹಾರ, ಮಾತುಕತೆಗಳು ಸುತ್ತಲಿನ ಸಮಾಜದ ಮೇಲೆ ಬೀರುವ ಪ್ರಭಾವ ಇನ್ನೂ ಹೆಚ್ಚು ಗಾಢವಾಗಿರುತ್ತದೆ. ಅಂತಹ ಹದಿನಾಲ್ಕು ಮಂದಿ ಸಾತ್ವಿಕರ ಬದುಕಿನ ಚಿತ್ರಣಗಳನ್ನು ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಿ ನೀಡುವ ಪ್ರಯತ್ನವನ್ನು 'ಸಂದುಹೋದ ಸಾತ್ವಿಕರು' ಎಂಬ ಪುಸ್ತಕದಲ್ಲಿ ಮಾಡಲಾಗಿದೆ. "ನಾನು ಕಂಡದ್ದನ್ನು ಮಾತ್ರ ದಾಖಲಿಸುತ್ತೇನೆ, ಬೇರೇನನ್ನೂ ಅಲ್ಲ" ಎಂಬ ಲೇಖಕರೇ ಹಾಕಿಕೊಂಡಿರುವ ನಿಯಮ ಪುಸ್ತಕವನ್ನು ಓದುವುದಕ್ಕೆ ಪ್ರಭಾವಿಸುತ್ತದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹ ಸಿ.ಆರ್. ಮುಕುಂದ ಅವರು ಈ ಕಿರುಹೊತ್ತಿಗೆಗೆ ಮುನ್ನುಡಿಯನ್ನು ಬರೆದಿದ್ದಾರೆ.

ಪುಸ್ತಕಕ್ಕಾಗಿ ಸಂಪರ್ಕಿಸಿ: 6360581957

## ಲೈಸೆನ್ಸ್ ಇಲ್ಲದೇ ವಾಹನ ಚಾಲನೆ ಮಾಡಬಾರದು




ವಾಹನ ಚಾಲನೆಗೆ ಲೈಸೆನ್ಸ್ ಕಡ್ಡಾಯ ಎಂಬ ನಿಯಮವನ್ನು ಈ ನಾಡಿನಲ್ಲಿ ರೂಢಿಸಲಾಗಿದೆ. ಇತ್ತೀಚೆಗೆ ಮಕ್ಕಳು ವಾಹನಗಳನ್ನು ಓಡಿಸಿ, ಅಪಘಾತಗಳಾಗುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿವೆ. ದೇಶಾದ್ಯಂತ 18 ವರ್ಷದ ಕೆಳಗಿನ ಬಾಲಕ–ಬಾಲಕಿಯರು ವಾಹನಗಳನ್ನು ಓಡಿಸಬಾರದು ಎಂಬ ನಿಯಮವಿದ್ದರೂ ಪೋಷಕರ ನಿರ್ಲಕ್ಷ್ಯ, ಬಾಲಕ–ಬಾಲಕಿಯರ ಮನೋರಂಜನೆ, ಅತ್ಯುತ್ಸಾಹದ ಕಾರಣದಿಂದಾಗಿ ಇಂತಹ ಅವಘಡಗಳು ನಡೆಯುತ್ತಿವೆ.



18 ವರ್ಷ ತುಂಬಿದ, ಸೂಕ್ತ ವಾಹನ ತರಬೇತಿಯನ್ನು ಪಡೆದ ಯುವಕರಿಗೆ ಲೈಸೆನ್ಸ್ ನೀಡಲಾಗುತ್ತದೆ. ಆದರೆ ಅದಕ್ಕೂ ಮೊದಲೇ ಮಕ್ಕಳ ಕೈಗೆ ವಾಹನವನ್ನು ನೀಡಿದ್ದರಿಂದ, ಅನೇಕ ಅವಾಂತರಗಳು ಸಂಭವಿಸಿದ ನಿದರ್ಶನಗಳನ್ನು ನೋಡಿದ್ದೇವೆ. ಹಾಗಾಗಿ ನಮ್ಮ ಮನೆಯ ಮಕ್ಕಳ ಜೀವವನ್ನು, ಜೀವನವನ್ನು ಉಳಿಸುವ ಜವಾಬ್ದಾರಿಯ ಜೊತೆಗೆ ಉಳಿದ ವಾಹನ ಚಾಲಕರ ಜೀವಕ್ಕೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಕರ್ತವ್ಯ ನಮ್ಮ ಮೇಲಿದೆ.

# ಸೇವೆಗೆ ಸಮರ್ಪಿತ ಭಾರತೀಯ ನಾರೀ

ದೇಶಾದ್ಯಂತ ಸೇವಾಭಾರತಿ – ಮಾತೃ ಮಂಡಳಿಯ ಮಹಿಳೆಯರು ಕೊರೋನಾ ಕಾಲದ ಸಮಸ್ಯೆಯೊಂದಿಗೆ ಹೆಣಗುತ್ತಿರುವ ಜನರಿಗೆ ರೇಷನ್ ಹಂಚುವುದರೊಂದಿಗೆ ಮಾಸ್ಕ್, ಪಿಪಿಇ ಕಿಟ್ ರಾಖಿಗಳನ್ನು ಮಾಡುವ ಹಾಗೂ ಕೊರೋನಾ ರೋಗಿಗಳಿಗೆ ಸಹಾಯವಾಣಿ ನಡೆಸುವಂತಹ ಅನೇಕ ಕಾರ್ಯಗಳನ್ನು ಮಾಡಿರುವರು. ಅಷ್ಟೇ ಅಲ್ಲದೇ ಬಸ್ ನಿಲ್ದಾಣ, ಸೇವಾಬಸ್ತಿಗಳಲ್ಲಿ ವಾಸಿಸುವ ಬಡ ಮಹಿಳೆಯರಿಗೂ ಉಚಿತ ಸ್ಯಾನಿಟರಿ ನ್ಯಾಪ್ಕಿನ್‌ಗಳನ್ನು ಹಂಚತೊಡಗಿದರು. ಆಗ್ರಾ ಹಾಗೂ ಸುತ್ತಮುತ್ತಲಿನ 127 ಸೇವಾಬಸ್ತಿಗಳಲ್ಲಿರುವ 20 ಸಾವಿರ ಮಹಿಳೆಯರಿಗೆ ನ್ಯಾಪ್ಕಿನ್‌ಗಳನ್ನು ಹಂಚಲಾಯಿತು ಹಾಗೂ ಕೊರೋನಾ ಸಮಯದಲ್ಲಿ ಆರೋಗ್ಯ ಮಾಹಿತಿಯನ್ನು ಸಹ ಕೊಡಲಾಯಿತು. 26 ಮಾರ್ಚ್ ನಿಂದ ಸತತ ನಾಲ್ಕು ತಿಂಗಳು 250ಕ್ಕಿಂತ ಅಧಿಕ ಜನರಿಗೆ ಉಚಿತ ಹಾಗೂ ಸಾವಿರಾರು ವಲಸೆ ಕಾರ್ಮಿಕರಿಗೆ ಕೇವಲ ಇಪ್ಪತ್ತು ರೂಪಾಯಿಯಲ್ಲಿ ಹೊಟ್ಟೆ ತುಂಬ ಊಟವನ್ನು ಸೇವಾಭಾರತಿಯ ಮಹಿಳೆಯರು ನೀಡಿದರು.

ಸಂಘದ ಸಂಸ್ಕಾರ ಪಡೆದ ಈ ಮಹಿಳೆಯರ ಸೇವಾ ಯಾತ್ರೆಯ ಚರ್ಚೆ ಮಾಡುತ್ತಾ, ಸೇವಾ ಭಾರತಿಯ ರಾಷ್ಟ್ರೀಯ ಉಪಾಧ್ಯಕ್ಷೆ ಅಮಿತಾ ಜೈನ್, 82 ವರ್ಷದ ಹರಿದಿನಿ ಜೋಶಿ ಹಾಗೂ 80 ವರ್ಷದ ಪ್ರಕಾಶ್ ಖನೂಜ ಇವರ ಉದಾಹರಣೆ ಕೊಡುತ್ತಾರೆ. ಇವರು ಈ ಇಳಿವಯಸ್ಸಿನಲ್ಲಿ ಮಾಸ್ಕ್ ಹೊಲಿದು ಸೇವಾಬಸ್ತಿಗಳಲ್ಲಿ ಉಚಿತವಾಗಿ ಹಂಚಿರುವರು. ಮಾಲ್ವಾ ಪ್ರಾಂತದ 9 ಪಟ್ಟಣದಲ್ಲಿ ಸಹೋದರಿಯರು ರಾಖೀಗಳನ್ನು ತಯಾರಿಸಿ ಅವಶ್ಯಕತೆ ಇರುವ ಮಹಿಳೆಯರಿಗೆ ಆದಾಯದ ಮೂಲವನ್ನು ನೀಡಿದರು ಮಾತ್ರವಲ್ಲ ಹಾಟ್‌ಸ್ಪಾಟ್ ಆಗಿದ್ದ ಇಂದೋರ್‌ನಲ್ಲಿ ಸಹೋದರಿಯರ ರಾಖಿಗಳನ್ನು ಸಹೋದರರಿಗೆ ತಲುಪಿಸಿ ಈ ವಿಶಿಷ್ಟ ಸೇವಾ ಕಾರ್ಯದಿಂದ ರಕ್ಷಾಬಂಧನ ಹಬ್ಬವನ್ನು ಅವಿಸ್ಮರಣೀಯಗೊಳಿಸಲಾಯಿತು.

ಸೇವಾಭಾರತಿ ಮಾತೃ ಮಂಡಳಿ ಮಾಲ್ವಾ ಪ್ರಾಂತ್ಯದ ಸಂಯೋಜಕಿ ಸುನೀತಾ ತಾಯಿ ಹೇಳುವರು – ಸಹೋದರಿಯರು ಲಾಕ್ಡೌನ್ ಕಾಲದಲ್ಲಿ ಅನೇಕ ಖಾದ್ಯ ಸಾಮಾಗ್ರಿಗಳನ್ನು ಉತ್ತಮ ಪ್ಯಾಕೇಜ್ ನೊಂದಿಗೆ ಮಾರಿ ಕೊರೋನಾ ಕಾಲದಲ್ಲಿಯೇ "ಮಾ ಅನ್ನಪೂರ್ಣ ಸ್ವಸಹಾಯ ಸಂಘ" ದ ನಿರ್ಮಾಣ ಮಾಡಿದರು, ಅಲ್ಲದೇ ಹಲವು ಪರಿವಾರಗಳು ಆರ್ಥಿಕ ಸಂಕಷ್ಟದಿಂದ ಮೇಲಕ್ಕೆ ಬಂದವು.

ಜಮ್ಮು–ಕಾಶ್ಮೀರದ ನಗರೋಟಾದ ಉದಾಹರಣೆ ಸಹ ಇದಕ್ಕಿಂತ ಭಿನ್ನವಾಗಿಲ್ಲ. ಸ್ಥಳಾಂತರ ಹೊಂದಿದ ಕಾಶ್ಮೀರಿ ಪಂಡಿತರಿಗಾಗಿ ನಿರ್ಮಾಣವಾಗಿರುವ ಜಗತಿ ಕಾಲನಿಯ ಪರಿವಾರದ ಮೇಲೆ ಲಾಕ್ಡೌನ್ ಸಮಯದಲ್ಲಿ ಆರ್ಥಿಕ ಸಂಕಟ ಹೆಚ್ಚಾದಾಗ ಅಂಜಲಿ ಅಕ್ಕನ ನೇತೃತ್ವದಲ್ಲಿ 100 ಪರಿವಾರದ ಸಹೋದರಿಯರು ಮಾಸ್ಕ್, ಪಿಪಿಇ ಕಿಟ್ ಹೊಲಿಯುವುದರಿಂದ ಹಿಡಿದು, ಉಪ್ಪಿನಕಾಯಿ ಮಾರಿ ತನ್ನ ಮನೆಯ ಖರ್ಚು ಸರಿದೂಗಿಸಿದರು. ಕೊರೋನ ಕಾಲದಲ್ಲಿ ಪಾಸಿಟಿವ್ ರೋಗಿಗಳಿಗೆ ಫೋನ್ ಮಾಡಿ ಅವರ ಚಿಂತೆಯನ್ನು ದೂರ ಮಾಡುವ ಹಾಗೂ ಮನೋಬಲ ಹೆಚ್ಚಿಸುವ ಕೆಲಸವನ್ನು ಸಹ ಸೇವಾಭಾರತಿಯ ಸಹೋದರಿಯರು ಮಾಡಿರುವರು.

ಭೋಪಾಲ ಮಹಾನಗರ ಮಹಿಳಾ ಸಹ ಸಂಯೋಜಕಿ ಅಭಾ ಪಾಂಡೆ ಹಾಗೂ ಅವರ ಮಾತೃ ಮಂಡಳಿಯ ಸ್ನೇಹಿತರು 'ಸೇವಾಭಾರತಿ ದೂರ ಭಾಷಾ ಮಿತ್ರ ಅಭಿಯಾನ'ದ ಈ ಪ್ರಶಂಸನೀಯ ಕಾರ್ಯಕ್ರಮದ ಮೂಲಕ 1400 ಕೊರೋನಾ ಪಾಸಿಟಿವ್ ರೋಗಿಗಳು, ಶಂಕಿತ ರೋಗಿಗಳು ಹಾಗೂ ವೃದ್ಧರು ಇವರೆಲ್ಲರ ಪಟ್ಟಿಯನ್ನು ಅಧಿಕಾರಿಗಳಿಂದ ಪಡೆದುಕೊಂಡು 24 ಗಂಟೆಯೊಳಗೆ ಫೋನ್ ರಿಚಾರ್ಜ್ ಮಾಡಿ ಔಷಧಿಗಳನ್ನು ತಲುಪಿಸಿ ಕೊರೋನ ಪಾಸಿಟಿವ್ ರೋಗಿಗಳ ಪರಿವಾರದೊಂದಿಗೆ ಕೌನ್ಸಿಲಿಂಗ್ ಮಾಡಿ ಅನೇಕ ಜನರ ಮನದಲ್ಲಿರುವ ಕತ್ತಲೆಯನ್ನು ಹೋಗಲಾಡಿಸಿದರು.

ದೇಶದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸೇವಾಭಾರತಿಯ ಸಹೋದರಿಯರು ಕೆಲವು ಸ್ಥಳಗಳಲ್ಲಿ ಮೆಡಿಕಲ್ ಸಹಾಯವಾಣಿಯನ್ನು ಸಹ ನಡೆಸಿದರು. ತೆಲಂಗಾಣ ಸಂಘಟನಾ ಮಂತ್ರಿ ಜಯಪ್ರದಾ ಅವರು ಹೇಳುವಂತೆ – ಹೈದರಾಬಾದ್‌ನಲ್ಲಿ ನಡೆಯುತ್ತಿರುವ ಸೇವಾಭಾರತಿ ಕೋವಿಡ್ ಸಹಾಯವಾಣಿಯ ಕಾಲ್‌ಸೆಂಟರ್‌ನಲ್ಲಿ 50 ಯುವತಿಯರು ಹಾಗೂ ಮಹಿಳೆಯರ ತಂಡ ವೈದರ ಸಹಾಯದಿಂದ ಜನರಿಗೆ ಮನೆಯಲ್ಲಿ ಜ್ವರ – ಶೀತ – ಕೆಮ್ಮು ಇತ್ಯಾದಿ ಚಿಕಿತ್ಸೆ ನೀಡಿದರು. ಗರ್ಭವತಿ ಮಹಿಳೆಯರಿಗೆ ಸುರಕ್ಷಿತ ಆಸ್ಪತ್ರೆಗಳ ದಾರಿ ತೋರಿದರು ಹಾಗೂ ಸ್ವಯಂಸೇವಕ ಸಹೋದರರ ಸಹಾಯದಿಂದ 500ಕ್ಕಿಂತಲೂ ಹೆಚ್ಚು ಕೊರೋನ ರೋಗಿಗಳಿಗಾಗಿ, ಮನೆಯಲ್ಲಿಯೇ ಕೊರೋನಾ ಕಿಟ್ ತಯಾರಿಸಿ ಮಾರಿದರು. ಕೇವಲ ಕೊರೋನಾ ಕಾಲಘಟ್ಟವಲ್ಲದೇ ಇಂತಹ ಅಗಣಿತ ಉದಾಹರಣೆಯ ಮೂಲಕ ನಿರಂತರವಾಗಿ ರಾಷ್ಟ್ರೀಯ ಸೇವಾಭಾರತಿ ನಾಡಿನ ಸೇವೆಗಾಗಿ ಸದಾ ಶ್ರಮಿಸುತ್ತಿದೆ.


ಉತ್ಥಾನ

ಸಂಕ್ರಾಂತಿ - ಗಣರಾಜ್ಯೋತ್ಸವ

ವಿಶೇಷಾಂಕ 2025


ಆರೆಸ್ಸೆಸ್@100: ಹಿನ್ನೆಲೆ, ತಾತ್ವಿಕತೆ ಮತ್ತು ಸಾಧನೆ

ರಾಜ್ಯ ಹಾಗೂ ರಾಷ್ಟ್ರಮಟ್ಟದ ಭಿನ್ನನೆಲೆಯ ಹಲವು ವಿದ್ವಾಂಸರು, ಚಿಂತಕರ ಚರ್ಚೆ, ವಿಶ್ಲೇಷಣೆಗಳನ್ನೊಳಗೊಂಡ 27 ಲೇಖನಗಳು ಈ ಸಂಚಿಕೆಯಲ್ಲಿದೆ.

ಆಸಕ್ತರು ನಿಮ್ಮ ಪ್ರತಿಯನ್ನು ಇಲ್ಲಿ ಕಾಯ್ದಿರಿಸಬಹುದು:
www.sahityabooks.com/shop/utthana/rss100-utthana-sankranti-special-issue-2025/

**ಬೆಲೆ: ₹ 50 | ಪುಟಗಳು: 156**

ಪ್ರತಿಗಳಿಗಾಗಿ ಸಂಪರ್ಕಿಸಿ: 6360581957





**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಸುಲಕ್ಷಣ ಶರ್ಮಾ

### ಕಾಮ್ಯ ಕಾರ್ತಿಕೇಯನ್ ಏಳು ಖಂಡಗಳ ಅತ್ಯುನ್ನತ ಶಿಖರಗಳ ಏರಿದ ಅತ್ಯಂತ ಕಿರಿಯ ಮಹಿಳೆ



ಮುಂಬೈನ ಇಂಡಿಯನ್ ನೇವಿ ಚಿಲ್ಡ್ರನ್ಸ್ ಸ್ಕೂಲ್‌ನ 17 ವರ್ಷದ ವಿದ್ಯಾರ್ಥಿನಿ ಕಾಮ್ಯ ಕಾರ್ತಿಕೇಯನ್ ಎಲ್ಲಾ ಏಳು ಖಂಡಗಳಲ್ಲಿನ ಅತ್ಯುನ್ನತ ಶಿಖರಗಳನ್ನು ಏರಿದ ಅತ್ಯಂತ ಕಿರಿಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕಾಮ್ಯ 2024ರ ಡಿಸೆಂಬರ್ 24 ರಂದು ಅಂಟಾರ್ಕ್ಟಿಕಾದ ಮೌಂಟ್ ವಿನ್ಸನ್ ಅನ್ನು ಸ್ಕೇಲಿಂಗ್ ಮಾಡುವ ಮೂಲಕ ಮೈಲಿಗಲ್ಲನ್ನು ಸಾಧಿಸಿದರು. ಈ ಮೂಲಕ ಸೆವೆನ್ ಸಮ್ಮಿಟ್ಸ್ ಚಾಲೆಂಜ್ ಅನ್ನು ಪೂರ್ಣಗೊಳಿಸಿದರು. ಇದು ಪರ್ವತಾರೋಹಣದಲ್ಲಿ ಪ್ರತಿಷ್ಠಿತ ಸಾಧನೆಯಾಗಿದೆ. ಭಾರತೀಯ ನೌಕಾಪಡೆಯು ಕಾಮ್ಯ ಮತ್ತು ಆಕೆಯ ತಂದೆಗೆ ಅಭಿನಂದನೆ ಸಲ್ಲಿಸಿದೆ, "ಇದು ಭಾರತ ಮತ್ತು ನೌಕಾಪಡೆಗೆ ಹೆಮ್ಮೆಯ ಕ್ಷಣವಾಗಿದೆ" ಎಂದಿದೆ.


### ಭಾರತವು ವಿಶ್ವದ ಮೂರನೇ ಅತಿದೊಡ್ಡ ಸ್ಟಾರ್ಟಪ್ ಪರಿಸರ ವ್ಯವಸ್ಥೆ ಹೊಂದಿದೆ: ಪಿಯೂಷ್ ಗೋಯಲ್

110ಕ್ಕೂ ಹೆಚ್ಚು ಯೂನಿಕಾರ್ನ್ ಸ್ಟಾರ್ಟ್‌ಅಪ್‌ಗಳನ್ನು ಹೊಂದಿರುವ ಭಾರತವು ವಿಶ್ವದ ಮೂರನೇ ಅತಿದೊಡ್ಡ ಸ್ಟಾರ್ಟಪ್ ಪರಿಸರ ವ್ಯವಸ್ಥೆಯಾಗಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ನವದೆಹಲಿಯಲ್ಲಿ ಭಾರತೀಯ ಸ್ಟಾರ್ಟ್‌ಅಪ್‌ಗಳ ಕುರಿತು ಮಾಧ್ಯಮಗಳೊಂದಿಗೆ ಸಂವಾದ ನಡೆಸಿದ ಅವರು ಕಳೆದ ಒಂಬತ್ತು ವರ್ಷಗಳಲ್ಲಿ ದೇಶದ ಸ್ಟಾರ್ಟ್‌ಅಪ್ ಪ್ರಯಾಣವು ಪರಿವರ್ತನಾಶೀಲವಾಗಿದೆ ಮತ್ತು ನವೀನ ಆಲೋಚನೆಗಳನ್ನು ಹೊಂದಿರುವ ಅಸಂಖ್ಯಾತ ವ್ಯಕ್ತಿಗಳಿಗೆ ಸ್ಫೂರ್ತಿದಾಯಕವಾಗಿದೆ ಎಂದು ಹೇಳಿದರು. ದೇಶದ 43 ಪ್ರತಿಶತದಷ್ಟು ಸ್ಟಾರ್ಟಪ್‌ಗಳು ಮಹಿಳಾ ಸಂಸ್ಥಾಪಕರನ್ನು ಹೊಂದಿವೆ. ಜಗತ್ತಿನಾದ್ಯಂತ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ಹೊರತಾಗಿಯೂ ಒಟ್ಟಾರೆ ರಫ್ತುಗಳು ಹೆಚ್ಚುತ್ತಿರುವ ಪ್ರವೃತ್ತಿಯಲ್ಲಿವೆ ಮತ್ತು ಭವಿಷ್ಯದಲ್ಲಿ 800 ಬಿಲಿಯನ್ ಡಾಲರ್‌ಗಳನ್ನು ದಾಟುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

## ಸಾಲುದ್ದದ ಸುದ್ದಿಗಳು

### ಕನ್ಯಾಕುಮಾರಿಯಲ್ಲಿ ಭಾರತದ ಮೊದಲ ಸಮುದ್ರದ ಮೇಲಿನ ಗಾಜಿನ ಸೇತುವೆ ಉದ್ಘಾಟನೆ

ಕನ್ಯಾಕುಮಾರಿಯಲ್ಲಿ ವಿವೇಕಾನಂದ ಸ್ಮಾರಕ ಮತ್ತು ತಿರುವಳ್ಳುವರ್ ಪ್ರತಿಮೆಯನ್ನು ಸಂಪರ್ಕ ಕಲ್ಪಿಸುವ ಗಾಜಿನ ಸೇತುವೆಯನ್ನು ಉದ್ಘಾಟಿಸಲಾಯಿತು. ಇದು ಭಾರತದ ಮೊದಲ ಸಮುದ್ರದ ಮೇಲಿನ ಗಾಜಿನ ಸೇತುವೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಗಾಜಿನ ಸೇತುವೆಯು 77 ಮೀಟರ್ ಉದ್ದ ಮತ್ತು 10 ಮೀಟರ್ ಅಗಲವನ್ನು ಹೊಂದಿದೆ. ಇದು ಕನ್ಯಾಕುಮಾರಿಯ ಸುಂದರ ಭೂದೃಶ್ಯಕ್ಕೆ ಮತ್ತಷ್ಟು ಅಂದವನ್ನು ನೀಡಲಿದೆ. ಹೊಸ ಗಾಜಿನ ಸೇತುವೆಯ ಮೂಲಕ ಇನ್ನು ಮುಂದೆ ಪ್ರವಾಸಿಗರು ನಿಧಾನವಾಗಿ ನಡೆಯುತ್ತಾ ಪ್ರಕೃತಿಯನ್ನು ಆಸ್ವಾದಿಸುತ್ತಾ ಪಯಣಿಸಬಹುದು. ಇದು ಅವರ ಪ್ರವಾಸಿ ಅನುಭವವನ್ನು ಹೆಚ್ಚಿಸುತ್ತದೆ ಮತ್ತು ಸುತ್ತಮುತ್ತಲಿನ ಸಮುದ್ರವನ್ನು ಅಡೆತಡೆಯಿಲ್ಲದಂತೆ ವೀಕ್ಷಿಸಲು ಅನುವು ಮಾಡಿಕೊಡುತ್ತದೆ.



### ಕೊಚ್ಚಿ: 11,600 ನೃತ್ಯಗಾರರಿಂದ ಭರತನಾಟ್ಯ ಪ್ರದರ್ಶನ, ಗಿನ್ನೆಸ್ ದಾಖಲೆ



ನಟಿ ದಿವ್ಯಾ ಉನ್ನಿ ಅವರು ಸುಮಾರು 11,600 ಭರತನಾಟ್ಯ ನೃತ್ಯಗಾರರ ತಂಡವನ್ನು ಮುನ್ನಡೆಸಿ ಭರತನಾಟ್ಯ ಪ್ರದರ್ಶಿಸುವ ಮೂಲಕ ಗಮನಾರ್ಹ ಸಾಧನೆಯನ್ನು ಮಾಡಿದ್ದಾರೆ. ಈ ಗಮನಾರ್ಹ ಪ್ರದರ್ಶನದ ಮೂಲಕ ಅವರು ಗಿನ್ನೆಸ್ ವಿಶ್ವ ದಾಖಲೆಯ ಪುಟ ಸೇರಿದ್ದಾರೆ. ಡಿಸೆಂಬರ್ 29, ಭಾನುವಾರ ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಈ ಬೃಹತ್ 'ಮೃದಂಗ ನಾದಂ' ಎಂಬ ಭರತನಾಟ್ಯ ಪ್ರದರ್ಶನ ನಡೆದಿದೆ. ಈ ಮೂಲಕ ದಿವ್ಯಾ ಉನ್ನಿ ಮತ್ತು ಅವರ ತಂಡ ಹಿಂದಿನ ವಿಶ್ವ ದಾಖಲೆಯನ್ನು ಮುರಿದಿದೆ. ಹಿಂದೆ 10,176 ನೃತ್ಯಗಾರರು ಭರತನಾಟ್ಯ ಪ್ರದರ್ಶಿಸಿದ ದಾಖಲೆ ಇತ್ತು.

### 10 ವರ್ಷಗಳಲ್ಲಿ ಉದ್ಯೋಗ ಸೃಷ್ಟಿಯಲ್ಲಿ 36% ಏರಿಕೆ: ದಾಖಲೆ

ಎನ್‌ಡಿಎ ಸರ್ಕಾರದ 10 ವರ್ಷಗಳ ಅವಧಿಯಲ್ಲಿ ಐದು ಪಟ್ಟು ಹೆಚ್ಚು ಉದ್ಯೋಗ ಸೃಷ್ಟಿಯಾಗಿದೆ. 2014–15ರಲ್ಲಿ ಇದ್ದ ಉದ್ಯೋಗಕ್ಕೆ ಹೋಲಿಸಿದರೆ 2023–24ರಲ್ಲಿ ದೇಶದಲ್ಲಿ ಉದ್ಯೋಗ ಸೃಷ್ಟಿಯ ಪ್ರಮಾಣ ಶೇ.36ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಈ ಕುರಿತು ಮಾಹಿತಿ ನೀಡಿರುವ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ, '2014–15ರಲ್ಲಿ ದೇಶದಲ್ಲಿ 47.15 ಕೋಟಿ ಉದ್ಯೋಗ ಇತ್ತು. ಯುಪಿಎ ಆಡಳಿತದ ಅವಧಿಯಾದ 2004–14ರಲ್ಲಿ ಉದ್ಯೋಗ ಬೆಳವಣಿಗೆ ಕೇವಲ ಶೇ.7ರಷ್ಟಿತ್ತು. ಅಂದರೆ ಕೇವಲ 2.9 ಕೋಟಿ ಹೆಚ್ಚುವರಿ ಉದ್ಯೋಗ ಸೃಷ್ಟಿಯಾಗಿತ್ತು. ಆದರೆ 2023–24ರಲ್ಲಿ ದೇಶದಲ್ಲಿ ಉದ್ಯೋಗ ಪ್ರಮಾಣ 64.33 ಕೋಟಿಗೆ ತಲುಪಿದೆ. ಮೋದಿ ಸರ್ಕಾರದ ಅವಧಿಯಾದ 2014–24ರಲ್ಲಿ ಉದ್ಯೋಗ ಬೆಳವಣಿಗೆ ಪ್ರಮಾಣ ಶೇ.36ರಷ್ಟು ದಾಖಲಾಗಿದೆ.

## ಸವಾಲುಗಳನ್ನು ಜಿಗಿದು ಖೇಲ್‌ರತ್ನ ಪಡೆದ ಭಾರತದ ಕ್ರೀಡಾರತ್ನ ಪ್ರವೀಣ್ ಕುಮಾರ್

ಪ್ರೇರಣಾ

ಭಾರತದ ಕ್ರೀಡೆಗಳಲ್ಲಿ ಒಲಂಪಿಕ್ಸ್ ನಂತರ ನಡೆಯುವ ಪ್ಯಾರಾಲಿಂಪಿಕ್ಸ್ ಅಂತರಾಷ್ಟ್ರೀಯ ಕ್ರೀಡಾಕೂಟವಾಗಿದ್ದು, ಈ ಸ್ಪರ್ಧೆಯು ಎರಡು ವರ್ಷಕ್ಕೊಮ್ಮೆ ನಡೆಯುತ್ತದೆ. ಅಂದರೆ ಬೇಸಿಗೆ ಮತ್ತು ಚಳಿಗಾಲದ ಪರ್ಯಾಯವಾಗಿ ನಡೆಸಲಾಗುತ್ತದೆ. ಇದರಲ್ಲಿ ಅನೇಕ ಕ್ರೀಡಾಪಟುಗಳು ತಮ್ಮ ಗುರಿಯನ್ನು ತಲುಪಿ ಸಾಧನೆಯನ್ನು ಮಾಡಿದ್ದಾರೆ. ಅದರಲ್ಲಿ ಒಬ್ಬರು ಪ್ರವೀಣ್ ಕುಮಾರ್.

ಇವರು ಉತ್ತರ ಪ್ರದೇಶದ ಗೌತಮ್ ಬುಧ್ ನಗರ ಜಿಲ್ಲೆಯ ಜೇವರ್ ತೆಹಸಿಲ್ ಗೋವಿಂದಗಢ ಗ್ರಾಮದಲ್ಲಿ ಮೇ 15, 2003 ರಂದು ಜನಿಸಿದರು. ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಜೇವರ್‌ನ ಪ್ರಗ್ಯಾನ್ ಪಬ್ಲಿಕ್ ಸ್ಕೂಲ್‌ನಲ್ಲಿ ಪಡೆದಿರುತ್ತಾರೆ. ಮತ್ತು ತಮ್ಮ ಪದವಿ ಶಿಕ್ಷಣವನ್ನು ಮೋತಿಲಾಲ್ ನೆಹರು ಕಾಲೇಜಿನಲ್ಲಿ ಪಡೆದಿರುತ್ತಾರೆ. ಇಂದು ಇವರು ದೇಶದಲ್ಲಿ ಪ್ಯಾರಲಿಂಪಿಕ್‌ನಲ್ಲಿ ಉನ್ನತ ಸ್ಥಾನವನ್ನು ಪಡೆದುಕೊಂಡಿದ್ದಾರೆ.

**ಒಲಂಪಿಕ್ಸ್ ಕಡೆಗಿನ ಆಸಕ್ತಿ:** ಪ್ರವೀಣ್ ಕುಮಾರ್ ಅವರು ಜನಿಸುವಾಗಲೇ ಸಣ್ಣ ಕಾಲಿನೊಂದಿಗೆ ಜನಿಸಿದರು. ಅದರ ಕುರಿತಾಗಿ ಯಾವುದೇ ಯೋಚನೆಯನ್ನು ಮಾಡದೆ ಗುಂಪು ಕ್ರೀಡೆಯಾದ ವಾಲಿಬಾಲ್ ಮೂಲಕ ತಮ್ಮ ಕ್ರೀಡಾ ಉತ್ಸಾಹವನ್ನು ಬೆಳೆಸಿಕೊಂಡರು. ಅನೇಕ ಕಡೆಗಳಲ್ಲಿ ಸ್ಪರ್ಧೆಗಳನ್ನು ಗೆಲ್ಲುವ ಮುಖಾಂತರ ತಮ್ಮ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸಿಕೊಂಡರು. ಜೂನಿಯರ್ ಈವೆಂಟ್‌ನಲ್ಲಿ ತಮ್ಮ ಸಮರ್ಥ ಎದುರಾಳಿಗಳಿಗೆ ತೀವ್ರ ಸ್ಪರ್ಧೆಯನ್ನು ನೀಡಿದ ನಂತರ ಎತ್ತರದ ಜಿಗಿತವನ್ನು ಆರಿಸಿಕೊಂಡರು. ಇಲ್ಲಿಂದ ಇವರು ಪ್ಯಾರಲಿಂಪಿಕ್‌ನಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಡಾ.ಸತ್ಯಪಾಲ್ ಸಿಂಗ್ ಅವರ ಮಾರ್ಗದರ್ಶನದಲ್ಲಿ ಸಂಪೂರ್ಣವಾಗಿ ತರಬೇತಿಯನ್ನು ಪಡೆಯುತ್ತಾ ಬಂದರು. ಕುಮಾರ್ ಅವರ ಸಾಧನೆಯೊಂದಿಗೆ ಸತ್ಯಪಾಲ್ ಅವರು ತರಬೇತಿ ನೀಡುವುದರ ಮೂಲಕ ಕೈ ಜೋಡಿಸಿದ್ದಾರೆ.

**ಸಾಧನೆ ಹಾಗೂ ಪ್ರಶಸ್ತಿ:** ಕ್ರೀಡೆಯ ಕಡೆಗೆ ತಮ್ಮ ಆಸಕ್ತಿಯನ್ನು ಹೊಂದಿದ್ದ ಕುಮಾರ್ ಅವರು ಪ್ಯಾರಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಮುಂದಾದರು. ಅದರಲ್ಲಿ ಉದ್ದ ಜಿಗಿತವನ್ನು ಆಯ್ಕೆ ಮಾಡಿಕೊಂಡ ಇವರು ತಮ್ಮ ಶ್ರದ್ಧೆ, ಶಿಸ್ತು, ಪರಿಶ್ರಮದಿಂದ ಅನೇಕ ಪದಕಗಳನ್ನು ಗಳಿಸಿಕೊಂಡಿದ್ದಾರೆ. 2019ರಲ್ಲಿ ನಡೆದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ, 2021ರಲ್ಲಿ ನಡೆದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ FAZZA ಗ್ರ್ಯಾಂಡ್‌ಪ್ರಿಕ್ಸ್‌ನಲ್ಲಿ ಚಿನ್ನದ ಪದಕ, 2022ರಲ್ಲಿ ನಡೆದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಚಿನ್ನದ ಪದಕ, 2023ರಲ್ಲಿ ನಡೆದ ವಿಶ್ವ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಹಾಗೂ 2024ರಲ್ಲಿ ನಡೆದ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದು ಏಷ್ಯನ್ ದಾಖಲೆಯನ್ನು ಸ್ಥಾಪಿಸಿದ್ದಾರೆ. ಇವರ ಈ ಸಾಧನೆಯಿಂದಾಗಿ ಭಾರತಕ್ಕೆ ಆರನೇ ಚಿನ್ನದ ಪದಕವನ್ನು ಗೆದ್ದು ದೇಶದೆಲ್ಲೆಡೆ ಹೆಸರುವಾಸಿಯಾಗಿದ್ದಾರೆ. ಜೊತೆಗೆ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಪುರುಷರ ಎತ್ತರ ಜಿಗಿತ T64 ವಿಭಾಗದಲ್ಲಿ ಚಿನ್ನವನ್ನು ಗೆದ್ದ ಸಾಧನೆಗಾಗಿ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿ, ಭಾರತದ ಅತ್ಯುನ್ನತ ಕ್ರೀಡಾ ಗೌರವವನ್ನು ಪಡೆದಿರುತ್ತಾರೆ. ದೇಶದಲ್ಲಿ ಉತ್ತಮ ಕ್ರೀಡಾಪಟುಗಳನ್ನು ಒಬ್ಬರನ್ನಾಗಿ ಗುರುತಿಸಿಕೊಂಡಿರುವುದು ಅವರಿಗೆ ಹಾಗೂ ಇಡೀ ದೇಶಕ್ಕೆ ಹೆಮ್ಮೆಯನ್ನು ತಂದುಕೊಟ್ಟಿದೆ.





"ಸಾಮಾನ್ಯ ವ್ಯಕ್ತಿಗೆ ಸಿಗುವ ಗೌರವಕ್ಕಾಗಿ ನಾನು ಹಂಬಲಿಸುತ್ತೇನೆ, ಅದಕ್ಕಾಗಿಯೇ ನಾನು ಸಮರ್ಥ ಕ್ರೀಡಾಪಟುಗಳೊಂದಿಗೆ ಸ್ಪರ್ಧಿಸುತ್ತೇನೆ. ಪ್ಯಾರಾ ಅಥ್ಲೀಟ್‌ಗಳು ದುರ್ಬಲರಲ್ಲ ಎಂದು ನಾನು ಜನರಿಗೆ ಹೇಳಲು ಬಯಸುತ್ತೇನೆ."
- ಪ್ರವೀಣ್ ಕುಮಾರ್

ರಾಷ್ಟ್ರಕ್ಕೆ ಹೆಚ್ಚಿನ ಪ್ರಶಸ್ತಿಗಳನ್ನು ತರಲು ಪ್ರಮುಖ ಪಂದ್ಯಾವಳಿಗಳಲ್ಲಿ ತಮ್ಮ ಅತ್ಯುತ್ತಮ ಪ್ರದರ್ಶನವನ್ನು ಮುಂದುವರಿಸುತ್ತೇನೆ ಎಂದು ಅವರು ಹೇಳಿದ್ದಾರೆ. ಇವರ ಈ ಶ್ರಮ, ಶಿಸ್ತು, ಅವರಿಗೆ ಸ್ಪರ್ಧೆಯ ಮೇಲಿರುವ ಶ್ರದ್ಧೆ ಇಂದು ಇವರು ಯಶಸ್ವಿಯಾಗಲು ಕಾರಣವಾಗಿದೆ. ಮುಂದೆಯೂ ಹೆಚ್ಚಿನ ರೀತಿಯಲ್ಲಿ ಪದಕಗಳನ್ನು ದೇಶಕ್ಕೆ ತಂದುಕೊಡಲಿ ಎಂದು ಆಶಿಸೋಣ. ಇಂತಹ ಸ್ಫೂರ್ತಿದಾಯಕ ವ್ಯಕ್ತಿತ್ವ ಮುಂದಿನ ಪೀಳಿಗೆಗೆ ಪ್ರೇರಣೆ ನೀಡುವಂತಾಗಲಿ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th JANUARY 2025
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-01-2025



## ಕುಗ್ರಾಮಗಳಿಗೂ ವೈದ್ಯಕೀಯ ಸೇವೆಯನ್ನು ತಲುಪಿಸುತ್ತಿದೆ ಭಾರತೀಯ ಸೇನೆ

ಭಾರತೀಯ ಸೇನೆಯು ಅಸ್ಸಾಂನ ತಿನ್ಸುಕಿಯಾ ಜಿಲ್ಲೆಯ ದೂರದ ಗ್ರಾಮಗಳಾದ ಕೆಂಗಿಯಾ, ಮುಲ್ಲಿಂಗ್ ಮತ್ತು ಹಂಜು ಗಾಂವ್‌ನಲ್ಲಿ ಆಪರೇಷನ್ ಸದ್ಭಾವನಾ ಭಾಗವಾಗಿ ವೈದ್ಯಕೀಯ ಶಿಬಿರವನ್ನು ನಡೆಸಿತು. ಪತ್ರಿಕಾ ಪ್ರಕಟಣೆಯ ಪ್ರಕಾರ, ಈ ಉಪಕ್ರಮವು ಮೂರು ವೈದ್ಯರ ತಂಡವನ್ನು ಒಳಗೊಂಡಿತ್ತು, ಇದರಲ್ಲಿ ಇಬ್ಬರು ನಾಗರಿಕ ಆರೋಗ್ಯ ವೃತ್ತಿಪರರು ಮತ್ತು ಒಬ್ಬ ಸೇನಾ ವೈದ್ಯರು. ಜನ ಸಾಮಾನ್ಯರಿಗೆ ವ್ಯಾಪಕ ವೈದ್ಯಕೀಯ ಸೇವೆಗಳನ್ನು ಇಲ್ಲಿ ನೀಡಲಾಗುತ್ತಿದೆ. ಶಿಬಿರದಲ್ಲಿನ ಸೇವೆಗಳು ವೈದ್ಯಕೀಯ ತಪಾಸಣೆ, ಸಮಾಲೋಚನೆ, ಅಗತ್ಯ ಆರೋಗ್ಯ ಸೇವೆಗಳು ಮತ್ತು ಔಷಧಿಗಳ ವಿತರಣೆಯನ್ನು ಒಳಗೊಂಡಿದೆ. ತಕ್ಷಣದ ಆರೋಗ್ಯ ಕಾಳಜಿಯನ್ನು ಪರಿಹರಿಸುವುದರ ಜೊತೆಗೆ, ತಡೆಗಟ್ಟುವ ಆರೋಗ್ಯ ಕ್ರಮಗಳ ಪ್ರಾಮುಖ್ಯತೆಯ ಕುರಿತು ವೈದ್ಯರು ಈ ವೇಳೆ ಜನರಿಗೆ ಶಿಕ್ಷಣವನ್ನೂ ನೀಡಿದ್ದಾರೆ. ಶಿಬಿರವು ವಿವಿಧ ವಯೋಮಾನದ ಸುಮಾರು 860 ಸ್ಥಳೀಯರಿಗೆ ಪ್ರಯೋಜನವನ್ನು ನೀಡಿದೆ, ಸಮುದಾಯದ ಆರೋಗ್ಯ ಮತ್ತು ಯೋಗಕ್ಷೇಮವನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ಆರೋಗ್ಯ ರಕ್ಷಣೆಯು ಅತ್ಯಂತ ಕುಗ್ರಾಮ ಪ್ರದೇಶಗಳಿಗೂ ತಲುಪುವುದನ್ನು ಖಾತ್ರಿಪಡಿಸುವ ಮೂಲಕ ಸ್ಥಳೀಯ ಸಮುದಾಯಗಳನ್ನು ಬೆಂಬಲಿಸುವ ಮತ್ತು ಉನ್ನತೀಕರಿಸುವ ಭಾರತೀಯ ಸೇನೆಯ ಅಚಲ ಬದ್ಧತೆಯನ್ನು ಈ ಶಿಬಿರ ಎತ್ತಿ ತೋರಿಸುತ್ತದೆ.



## ಮಕ್ಕಳ ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಖಾತೆ ಆರಂಭಕ್ಕೆ ಪೋಷಕರ ಪೂರ್ವಾನುಮತಿ ಕಡ್ಡಾಯ

18 ವರ್ಷಕ್ಕಿಂತ ಕೆಳಗಿನ ವಯಸ್ಸಿನ ಮಕ್ಕಳು ಸಾಮಾಜಿಕ ಜಾಲತಾಣ ದಲ್ಲಿಖಾತೆತೆರೆಯಲುಪೋಷಕರ ಅನುಮತಿ ಕಡ್ಡಾಯಗೊಳಿಸುವ ನೀತಿ ಜಾರಿಗೆ ಕೇಂದ್ರ ಸರ್ಕಾರ ನಿರ್ಧರಿಸಿದೆ. 2023ರಲ್ಲೇ ಸಂಸತ್ತಿನ ಅನುಮೋದನೆ ಪಡೆದುಕೊಂಡಿರುವ ಡಿಜಿಟಲ್ ಖಾಸಗಿ ಮಾಹಿತಿ ರಕ್ಷಣಾ ಕಾಯ್ದೆಗೆ ಕೇಂದ್ರ ಸರ್ಕಾರ ಕೆಲವೊಂದುತಿದ್ದುಪಡಿತಂದು ಹೊಸಕರಡು ವರದಿಯನ್ನು ಶುಕ್ರವಾರ ಬಿಡುಗಡೆ ಮಾಡಿದೆ. ಅದರಲ್ಲಿ ಈಮಹತ್ವದಅಂಶವಿದೆ. ಈ ಬದಲಾವಣೆಯ ಬಗ್ಗೆ ಅಭಿಪ್ರಾಯ ಗಳನ್ನು ತಿಳಿಸಲು ಜನರಿಗೆ ಫೆ.18ರವರೆಗೆ ಅವಕಾಶ ಕಲ್ಪಿಸಲಾಗಿದೆ. ಹೀಗೆ ಸಂಗ್ರಹವಾಗುವ ಅಭಿಪ್ರಾಯ ಆಧರಿಸಿ ಅಂತಿಮ ವರದಿ ಬಿಡುಗಡೆಗೆ ಸರ್ಕಾರ ಮುಂದಾಗಿದೆ. ಕರಡು ವರದಿ ಅನ್ವಯ, ಮಕ್ಕಳು ಸಾಮಾಜಿಕ ಜಾಲತಾಣಗಳಲ್ಲಿ ಖಾತೆ ತೆರೆಯಬೇಕಾದರೆ ಪೋಷಕರ ರುಜುವಾತು ಕಡ್ಡಾಯವಾಗಿದೆ. ಇದರ ಜೊತೆಗೆ ಕಂಪನಿ ಗಳು ತಮ್ಮ ದಾಖಲೆಗಳನ್ನು ಅಳಿಸುವಂತೆ ಮತ್ತು ಏಕೆ ದಾಖಲೆಗಳನ್ನು ಸಂಗ್ರಹಿಸುತ್ತಿದ್ದೀರಿ ಎಂದು ಕೇಳುವ ಅಧಿಕಾರ ಬಳಕೆದಾರನಿಗೆ ಇದೆ. ಒಂದು ವೇಳೆ ಕಂಪನಿ ಗಳು ಡಾಟಾ ಲೀಕ್ ಮಾಡಿದರೆ 250 ದಂಡ ಹಾಕುವ ಅಧಿಕಾರ ಕೇಂದ್ರಕ್ಕಿದೆ.

## ಸುವರ್ಣ ಗಡ್ಡೆ ಸಂಶೋಧನೆ: ಎನ್‌ಐಟಿಕೆಗೆ ಪೇಟೆಂಟ್



ಸುರತ್ಕಲ್‌ನ ಎನ್‌ಐಟಿ ಸಂಸ್ಥೆಯು ದೀರ್ಘ ಕಾಲೀನ ಸಂರಕ್ಷಿಸಿ ಇಡ ಬಹುದಾದ ಹಾಗೂ ಶೇ. 90ಕ್ಕೆ ಹೆಚ್ಚು ಸುರಕ್ಷಿತ, ಕೈ, ಬಾಯಿ ಕಡಿಯದಂತೆ ಸರಳವಾಗಿ ಆಹಾರಕ್ಕೆ ಬಳಸುವಂತೆ ಸುವರ್ಣ ಗಡ್ಡೆ, ಕಸುವು, ಮುದ್ದಿ ಗಡ್ಡೆಗಳ ಮೇಲೆ ಸಂಶೋಧನೆ ಮಾಡಿದ್ದು ಈ ಆವಿಷ್ಕಾರಕ್ಕೆ ಪೇಟೆಂಟ್ ಪಡೆದುಕೊಂಡಿದೆ. ಸೇಲಂ, ಆಂಧ್ರ ಮತ್ತಿತರೆಡೆ ಭೌಗೋಳಿಕವಾಗಿ ಬೆಳೆಯುವ ಗಡ್ಡೆಗಳಲ್ಲಿ ಹೆಚ್ಚು ಬಾಯಿ ಕಡಿತವಿರುತ್ತದೆ. ಇದನ್ನು ಆಹಾರಕ್ಕಾಗಿ ಬಳಸಬೇಕಾದರೆ ಹಲವು ವಿಧದಲ್ಲಿ ಪೂರ್ವ ತಯಾರಿ ಅಗತ್ಯವಿದ್ದು ಹೆಚ್ಚು ಸಮಯ ತಗೊಳ್ಳುತ್ತದೆ. ಎನ್‌ಐಟಿಕೆ ಈ ವಿಧಾನವನ್ನು ಸರಳಗೊಳಿಸಿ ನೇರವಾಗಿ ಅಡುಗೆ ಮಾಡಲು ಅನುಕೂಲವಾಗುವಂತೆ ಪರಿವರ್ತಿಸುವಲ್ಲಿ ಯಶಸ್ವಿಯಾಗಿದೆ. ಜೊಯಿಡಾ, ಸುಳ್ಯ ಮತ್ತಿತರೆಡೆ ಬೆಳೆಯುವ ಮುಡ್ಡಿಯಲ್ಲೂ ಕೈ ಬಾಯಿ ಕಡಿತದ ಪರಿಣಾಮವಿರುತ್ತದೆ. ಇದು ಕೂಡ ಸರಳವಾಗಿ ಬಳಸಲು ಸಾಧ್ಯ. ಹೋಟೆಲುಗಳಲ್ಲಿ ಸಮಯ ಉಳಿತಾಯ, ಕಾರ್ಮಿಕರ ಕೊರತೆ ನೀಗಿಸಲು, ಬೆಂಗಳೂರು, ಮುಂಬೈನಂತಹ ಮಹಾನಗರಗಳಲ್ಲಿ ಸಮಯವಕಾಶ ಕಡಿಮೆ ಇರುವ ಮಂದಿ ಸರಳವಾಗಿ ಇದನ್ನು ಬಳಸಿ ಅಡುಗೆ ತಯಾರಿಸಬಹುದಾಗಿದೆ. ಇನ್ನು ದೀರ್ಘಕಾಲೀನ ಬಾಳಿಕೆ ಬರುವಂತೆ ವ್ಯವಸ್ಥೆ ಮಾಡಿರುವುದರಿಂದ ವಿದೇಶಗಳಿಗೂ ರಫ್ತು ಮಾಡಲು ಸಾಧ್ಯವಿದ್ದು ಮುಂದಿನ ದಿನಗಳಲ್ಲಿ ಇದಕ್ಕೆ ಭಾರೀ ಬೇಡಿಕೆ ಬರುವ ಸಾಧ್ಯತೆಯಿದೆ. ಗಲ್ಫ್ ದೇಶಗಳ ಸೂಪರ್ ಮಾರ್ಕೆಟ್‌ಗಳಿಗೆ ಇದರ ಸ್ಯಾಂಪಲ್ ಗಳನ್ನು ಈಗಾಗಲೇ ಕಳಿಸಲಾಗಿದೆ. ಬೆಂಗಳೂರಿನಲ್ಲಿ ಎನ್‌ಐಟಿಕೆಯ ಆವಿಷ್ಕರಿಸಿದ ಮಾದರಿ ಪ್ರಸಿದ್ಧಿ ಪಡೆದುಕೊಂಡಿದೆ.

## ಕೊನೆರು ಹಂಪಿ 2ನೇ ಬಾರಿಗೆ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್

ಭಾರತದ ಚೆಸ್ ಗ್ರ್ಯಾಂಡ್ ಮಾಸ್ಟರ್ ಕೊನೆರು ಹಂಪಿ ಇಂಡೋನೇಷ್ಯಾದ ಐರಿನ್ ಸುಕಂದರ್ ಅವರನ್ನು ಸೋಲಿಸುವ ಮೂಲಕ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಗೆದ್ದುಕೊಂಡರು. ಇದು ಅವರ ಎರಡನೇ ವಿಶ್ವ ರ್‍ಯಾಪಿಡ್ ಚೆಸ್ ಪ್ರಶಸ್ತಿ. ಅವರು ಈ ಹಿಂದೆ 2019ರಲ್ಲಿ ಜಾರ್ಜಿಯಾದಲ್ಲಿ ಪಂದ್ಯಾವಳಿಯನ್ನು ಗೆದ್ದು ಒಂದಕ್ಕಿಂತ ಹೆಚ್ಚು ಬಾರಿ ಪ್ರಶಸ್ತಿಯನ್ನು ಪಡೆದ ಚೀನಾದ ಜು ವೆನ್ಜುನ್ ಅವರ ಸಾಲಿಗೆ ಸೇರಿಕೊಂಡಿದ್ದಾರೆ. ಕೊನೆರು ಹಂಪಿ ಅವರು 11 ಅಂಕಗಳಲ್ಲಿ 8.5 ಅಂಕಗಳೊಂದಿಗೆ ಪಂದ್ಯಾವಳಿಯನ್ನು ಪೂರ್ಣಗೊಳಿಸಿದರು.




## ಕುರಿಗಾಹಿ ತಾಶಿ ನಮ್ಗ್ಯಾಲ್ ನಿಧನ, ಸೇನೆ ನಮನ



ಕಾರ್ಗಿಲ್ ಯುದ್ಧದ ವೇಳೆ ಒಳನುಸುಳುಕೋರರ ಬಗ್ಗೆ ಸೇನೆಗೆ ಮಾಹಿತಿ ನೀಡಿದ್ದ ಕುರಿಗಾಹಿ ತಾಶಿ ನಮ್ಗ್ಯಾಲ್ ಲಡಾಖ್‌ನ ಆರ್ಯನ್ ಕಣಿವೆಯಲ್ಲಿ ನಿಧನಹೊಂದಿದ್ದಾರೆ. ಅವರ ನಿಧನಕ್ಕೆ ಭಾರತೀಯ ಸೇನೆ ಗೌರವ ನಮನ ಸಲ್ಲಿಸಿದೆ. ಜತೆಗೆ ಕುಟುಂಬಸ್ಥರಿಗೆ ಸಂತಾಪ ಸೂಚಿಸಿದೆ. 'ಒಬ್ಬ ದೇಶಭಕ್ತ ನಮ್ಮನ್ನು ಅಗಲಿದ್ದಾರೆ. ಲಡಾಖ್‌ನ ಧೈರ್ಯಶಾಲಿಗೆ ಶಾಂತಿ ಸಿಗಲಿ. ಆಪರೇಷನ್ ವಿಜಯ್‌ಗೆ ಅವರು ನೀಡಿದ ಕೊಡುಗೆಯನ್ನು ಸುವರ್ಣಾಕ್ಷರಗಳಲ್ಲಿ ಕೆತ್ತಲಾಗುವುದು. ಕಾರ್ಗಿಲ್‌ನಲ್ಲಿ ಸೇನೆಗೆ ಸಹಾಯ ಮಾಡಿದ ತಾಶಿ ಅವರನ್ನು ದೇಶ ಎಂದಿಗೂ ನೆನಪಿನಲ್ಲಿಡುತ್ತದೆ' ಎಂದು ಸೇನೆಯು ತಿಳಿಸಿದೆ.

## ಎನ್‌ಸಿಸಿ: ಬಾಲಕಿಯರ ಪ್ರಮಾಣ ಏರಿಕೆ

ಎನ್‌ಸಿಸಿಯಲ್ಲಿ ಬಾಲಕಿಯರ ಸಂಖ್ಯೆ ಶೇ.40ರಷ್ಟಿದ್ದು, ಮುಂದಿನ ವರ್ಷಗಳಲ್ಲಿ ಹಂತ ಹಂತವಾಗಿ ವಿಸ್ತರಿಸಲು ಯೋಜಿಸಲಾಗಿದೆ ಎಂದು ಎನ್‌ಸಿಸಿಯ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆಯುತ್ತಿರುವ ಎನ್‌ಸಿಸಿ ಗಣರಾಜ್ಯೋತ್ಸವ ಶಿಬಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎನ್‌ಸಿಸಿಯ ಪ್ರಧಾನ ನಿರ್ದೇಶಕ, ಲೆಫ್ಟಿನೆಂಟ್ ಜನರಲ್ ಗುರ್‌ಬಿರ್‌ಪಲ್ ಸಿಂಗ್ ಈ ವಿಷಯ ತಿಳಿಸಿದರು. ಶಿಬಿರ ಡಿಸೆಂಬರ್ 30ರಂದು ಆರಂಭವಾಗಿದ್ದು, ವಿವಿಧ ರಾಜ್ಯಗಳ ಒಟ್ಟು 2,361 ಎನ್‌ಸಿಸಿ ಕೆಡೆಟ್‌ಗಳು ಪಾಲ್ಗೊಂಡಿದ್ದಾರೆ. ಇವರಲ್ಲಿ 917 ಬಾಲಕಿಯರು ಸೇರಿದ್ದು, ಇದು ಈವರೆಗಿನ ಗರಿಷ್ಠ ಹಾಜರಿಯಾಗಿದೆ ಎಂದು ತಿಳಿಸಿದರು. ಜಮ್ಮು ಮತ್ತು ಕಾಶ್ಮೀರ, ಲಡಾಖ್‌ನ 114 ಕೆಡೆಟ್‌ಗಳು, ಈಶಾನ್ಯ ವಲಯದಿಂದ ಆಗಮಿಸಿರುವ 178 ಕೆಡೆಟ್‌ಗಳು ಇವರಲ್ಲಿ ಸೇರಿದ್ದಾರೆ. ಸ್ನೇಹಿ ರಾಷ್ಟ್ರಗಳ 15ಕ್ಕೂ ಹೆಚ್ಚು ಕೆಡೆಟ್‌ಗಳು ಈ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ ಎಂದು ತಿಳಿಸಿದರು.

## ಪುಷ್ಪಗಳಲ್ಲಿ ಮೂಡಲಿದೆ ರಾಮಾಯಣ



ಗಣರಾಜ್ಯೋತ್ಸವದ ಅಂಗವಾಗಿ ಜನವರಿ 16ರಿಂದ 26ರವರೆಗೆ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆಯಲಿರುವ ಫಲಪುಷ್ಪ ಪ್ರದರ್ಶನದಲ್ಲಿ ರಾಮಾಯಣ ಮಹಾಕಾವ್ಯ ರಚಿಸಿದ ಮಹರ್ಷಿ ವಾಲ್ಮೀಕಿ ಅವರ ಜೀವನ ಕಟ್ಟಿಕೊಡಲು ತೋಟಗಾರಿಕೆ ಇಲಾಖೆ ಸಿದ್ಧತೆ ನಡೆಸಿದೆ. ಒಟ್ಟು 11 ದಿನಗಳ ಕಾಲ ಜರುಗಲಿರುವ ಈ ಬಾರಿಯ ಫಲಪುಷ್ಪ ಪ್ರದರ್ಶನದಲ್ಲಿ ರಾಮಾಯಣ ಮಹಾಕಾವ್ಯದ ಪ್ರಮುಖ ಘಟನೆಗಳನ್ನು ಫಲಪುಷ್ಪ ಪ್ರದರ್ಶನದಲ್ಲಿ ಪ್ರಸ್ತುತಪಡಿಸಲಾಗುತ್ತಿದೆ. ಹೂವುಗಳ ಮೂಲಕ ಮಹರ್ಷಿ ವಾಲ್ಮೀಕಿ ಅವರ ಜೀವನದ ಪ್ರಮುಖ ಘಟನೆಗಳು, ಅವರು ರಾಮಾಯಣ ರಚಿಸುತ್ತಿರುವ ಪ್ರತಿಮೆ ರಚಿಸಲಾಗುತ್ತದೆ. ಈ ಮೂಲಕ ರಾಮಾಯಣ ಮತ್ತು ಮಹರ್ಷಿ ವಾಲ್ಮೀಕಿ ಅವರ ಕುರಿತಾಗಿ ಜನರಿಗೆ ತಿಳಿಸುವ ಪ್ರಯತ್ನ ಮಾಡಲಾಗುವುದು ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ.ಜಗದೀಶ್ ತಿಳಿಸಿದ್ದಾರೆ.

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.